(ಇಂದು ದಿನಾಂಕಃ 24-01-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು)

**<u>ಮುಂದುವರೆದ ಮುಖ್ಯ ವಿಚಾರಣೆ ಶ್ರೀ ವಿ ಎಸ ಕೆ ಅರ್ಜಿದಾರರ ಪರ ವಕೀಲರಿಂದಃ</u>**

- ಆಸ್ಪತ್ರೆ ಬಿಡುಗಡೆ ಪತ್ರ ಹಾಜರುಪಡಿಸಿದ್ದು ಅದನ್ನು ನಿ.ಪಿ-10 ಎಂದು, ಗುರುತಿಸಲಾಯಿತು.
- ಔಷಧಿ ಬಿಲ್ಲುಗಳನ್ನುಹಾಜರುಪಡಿಸಿದ್ದು ಅದನ್ನು ನಿ.ಪಿ-10 ಎಂದು, ಗುರುತಿಸಲಾಯಿತು.

**<u>ಪಾಟೀ ಸವಾಲು ಶ್ರೀ ಆರ.ಎಸ.ಕೆ ಎದುರುದಾರ ಪರ ವಕೀಲರಿಂದಃ</u>**

1. ಮೃತ ವಿಜಯ ಕುಮಾರ ನನ್ನ ಗಂಡ. ದಿಃ 27-09-2023ರಂದು ಅಪಘಾತ ಆಗಿದೆ. ವಿಜಯ ಕುಮಾರ ಆಗ ಸಣ್ಣೂರಿನಿಂದ ವಾಪಸ್ಸು ಬರುತ್ತಿದ್ದರು. ಗಾಡಿ ಸಂಖ್ಯೆ 5900 ಇರುತ್ತದೆ. ಅಪಘಾತ ನಾನು ನೋಡಿಲ್ಲ. ನನ್ನ ಮೈದುನ ನನಗೆ ಅಪಘಾತದ ಬಗ್ಗೆ ತಿಳಿಸಿದ. ನನ್ನ ಮೈದುನ ಹಿಂದೆ ಬೇರೆ ಗಾಡಿಯಿಂದ ಬರುತ್ತಿದ್ದ. ಅಪಘಾತ ಹೇಗೆ ಆಯಿತು ಎಂದರೆ ಸಾಕ್ಷಿ ಎದುರುಗಡೆಯಿಂದ ಬಂದ ಕಾರು ನನ್ನ ಗಂಡನ ವಾಹನಕ್ಕೆ ಗುದ್ದಿರುತ್ತದೆ ಎಂದು ಹೇಳುತ್ತಾರೆ. ನನ್ನ ಗಂಡನ ಚಾಲನ ಪರವಾನಿಗೆ ಇತ್ತು ಆದರೆ ಅದನ್ನು ನ್ಯಾಯಾಲಯಕ್ಕೆ ಸಲ್ಲಿಸಿಲ್ಲ, ಅದನ್ನು ಸಲ್ಲಿಸುತ್ತೇನೆ. ವಿಜಯ ಕುಮಾರ ಆಗ ಸಣ್ಣೂರಿನಿಂದ ನಮ್ಮ ಊರಿಗೆ ಬರುತ್ತಿದ್ದರು. ಮಾಡಬೋಳಗೆ ಹೋಗುತ್ತಿದ್ದರು. ನನ್ನ ಗಂಡನ ಚಾಲನ ಪರವಾನಿಗೆ ಇರಲಿಲ್ಲ ಅವರೆ ಅಡ್ಡಾದಿಡ್ಡಿ ನಡೆಸಿಕೊಂಡು ಹೋಗಿ ಕಾರಿಗೆ ಗುದ್ದಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಅಪಘಾತದಲ್ಲಿ ನನ್ನ ಗಂಡನ ಮತ್ತು ಕಾರ ಚಾಲಕನ ಇಬ್ಬರ

ತಪ್ಪು ಇರುತ್ತದೆ ಎಂದರೆ ಸಾಕ್ಷಿ ಕಾರ ಚಾಲಕನ ತಪ್ಪು ಇದೆ ಎಂದು ಹೇಳುತ್ತಾರೆ. ನನ್ನ ಗಂಡನನ್ನು ಯುನೈಟೆಡ್ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ಅಲ್ಲಿ ವರೆಗೆ 3 ದಿನ ಚಿಕಿತ್ಸೆ ಕೊಟ್ಟಿರುತ್ತಾರೆ. ಅಲ್ಲಿಂದ ಅವರನ್ನು ಸರಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇನೆ. ಅಲ್ಲಿ ಅವರಿಗೆ 3 ದಿನ ಚಿಕಿತ್ಸೆಗಾಗಿ ರೂ.3,50,000/- ಖರ್ಚು ಮಾಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಪಘಾತವಾದಾಗ ನನ್ನ ಗಂಡನಿಗೆ 39 ವರ್ಷ ವಯಸ್ಸು ಆಗಿತ್ತು. ಆದಾರ ಕಾರ್ಡ ಸಲ್ಲಿಸಿಲ್ಲ. ನನ್ನ ಗಂಡನಿಗೆ 40 ವರ್ಷಕ್ಕಿಂತ ಹೆಚ್ಚಿನ ವಯಸ್ಸಾಗಿದ್ದುಯ, ಪರಿಹಾರ ಪಡೆಯುವ ಉದ್ದೇಶದಿಂದ ಅವನಿಗೆ 39 ವರ್ಷ ವಯಸ್ಸಾಗಿದೆ ಎಂದು ಆಧಾರ ಕಾರ್ಡ ಸಲ್ಲಿಸಿಲ್ಲ ಎಂದರೆ ಸರಿಯಲ್ಲ. ನನ್ನ ಗಂಡ ವೈನ ಶಾಪನಲ್ಲಿ ಕೆಲಸ ಮಾಡುತ್ತಿದ್ದನು. ನನ್ನ ಗಂಡ ತಿಂಗಳಿಗೆ 30,000/- ಪಡೆಯುತ್ತಿದ್ದನು. ವೈನ ಶಾಪನಲ್ಲಿ ನನ್ನ ಗಂಡನು ಕೆಲಸ ಮಾಡುತ್ತಿದ್ದನು ಎಂದು ತೋರಿಸಲು ದಾಖಲೆಯನ್ನು ತೋರಿಸಿಲ್ಲ. ನನ್ನ ಗಂಡ ತಿಂಗಳೀಗೆ 30000/- ಗಳಿಸುತ್ತಿದ್ದನು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮಕ್ಕಳು ಶಾಲೆ ಕಲಿಯುತಿದ್ದಾರೆ ಎಂದು ತೋರಿಸಲು ದಾಖಲೆ ಸಲ್ಲಿಸಿಲ್ಲ. ವಿಜಯಕುಮಾರರವರಿಗೆ ಇಬ್ಬರು ಅಣ್ಣತಮ್ಮಂದಿರು ಇರುತ್ತಾರೆ. ಸುಭದ್ರಮ್ಮ ನನ್ನ ಮೈದುನನ ಜೊತೆ ಇರುತ್ತೆರ ಎಂದರೆ ಸರಿ. ಅರ್ಜಿದಾರರಲೆಲ್ಲರೂ ನನ್ನ ಗಂಡನ ಆದಾಯ ಮೇಲೆ ಅವಲಂಬಿತರಾಗಿದ್ದೇವೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಕಾರ ಚಾಲಕನ ತಪ್ಪು ಇಲ್ಲದಿದ್ದರೂ ಸಹ ಪರಿಹಾರ ಪಡೆಯುವ ಉದ್ದೇಶದಿಂದ ಕಾರ ಚಾಲಕನ

ವಿರುದ್ಧ ಸುಳ್ಳು ದೂರು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಕೇಳಿರುವ ಪರಿಹಾರಕ್ಕೆ ಯಾವುದೇ ಆಧಾರ ಇಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು ಜೆ.ಎಮ್. ಎಫ್. ಸಿ,
ಚಿಂಚೋಳಿ.